ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 20/2016

(ಫ್ರಾಸಾ-6 ಚಾಸಾ-20)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 26.03.2026

| | | |
|---|---|---|
| ಸಾಕ್ಷಿದಾರರ ಹೆಸರು | - | ಬಲರಾಮೇಗೌಡ |
| ತಂದೆಯ ಹೆಸರು | - | ಲೇಟ್ ರಾಮೇಗೌಡ |
| ವಯಸ್ಸು | - | 65 ವರ್ಷ, |
| ಉದ್ಯೋಗ | - | ನಿವೃತ್ತ ಎಸ್‌ಪಿ, |
| ವಾಸ | - | ಮಂಡ್ಯ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಸೆಪ್ಟಂಬರ್ 2013 ರಿಂದ ಜುಲೈ 2016 ರವರೆಗೆ ಬೆಂಗಳೂರು ಉಪವಿಭಾಗದ ಡಿವೈಎಸ್ಪಿ ಆಗಿ ಕಾರ್ಯನಿರ್ವಹಿಸುತ್ತಿದ್ದೆನು. ಬನ್ನೇರುಘಟ್ಟ ಪೋಲಿಸ್ ಠಾಣೆ ಬೆಂಗಳೂರು ಉಪವಿಭಾಗದಲ್ಲಿ ಬರುತ್ತಿತ್ತು.

2. ದಿಃ12.06.2015 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಕಡತದೊಂದಿಗೆ ಚಾಸಾ-19 ಇವರಿಂದ ಎಸ್ ಪಿ, ಬೆಂಗಳೂರು, ಇವರ ಆದೇಶದ ಮೇರೆಗೆ ವಹಿಸಿಕೊಂಡು ಕಡತವನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ತನಿಖೆ ಮುಂದುವರಿಸಿ ಬೆಳಗ್ಗೆ 9.00 ಘಂಟೆಗೆ ಠಾಣೆಯಿಂದ ಹೊರಟು ಕೃತ್ಯ ನಡೆದ ಸ್ಥಳವಾದ ಆನೇಕಲ್ ತಾಃ , ಜಿಗಣಿ ಹೋಬಳಿ, ಸಂಪಂಗಿರಾಮನಗರ ಗ್ರಾಮದ ಚಾಸಾ-1 ರವರ ಮನೆಯ ಬಳಿಗೆ ಭೇಟಿ ನೀಡಿದ್ದು ಚಾಸಾ-1 ರವರು ಸ್ಥಳದಲ್ಲಿ ಹಾಜರಿದ್ದು ಸ್ಥಳ ತೋರಿಸಿದ್ದರ ಮೇರೆಗೆ ಚಾಸಾ-2, 13 ಮತ್ತು 14 ಪಂಚರ ಸಮಕ್ಷಮ ಬೆಳಗ್ಗೆ 09.30 ರಿಂದ 10.30 ಘಂಟೆಯವರೆಗೆ ಮಹಜರ್ ಜರುಗಿಸಿರುತ್ತೇನೆ. ಈಗ ನಾನು ನಿಪಿ-2 ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರ್ತಿಸಲಾಯಿತು. ಅದೇ ದಿನ ಚಾಸಾ-1 ರವರ ಮರುಹೇಳಿಕೆ ಹಾಗೂ ಚಾಸಾ-2 ರಿಂದ 4, 17 ಮತ್ತು 18 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

2. ಅದೇ ದಿನ ಆರೋಪಿತರ ಪತ್ತೆಗಾಗಿ ಚಾಸಾ-19 ಪಿಎಸ್ಐ ಹಾಗೂ ಸಿಬ್ಬಂದಿಗಳನ್ನು ನೇಮಕ ಮಾಡಿರುತ್ತೇನೆ. ದಿಃ14.06.2015 ರಂದು ಚಾಸಾ-1 ಮತ್ತು 1 ನೇ ಆರೋಪಿ ಜಾತಿ ಪ್ರಮಾಣ ಪತ್ರ ಕೋರಿ ತಹಶೀಲ್ದಾರ್, ಆನೇಕಲ್ ತಾಃ, ಇವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-5 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

3. ದಿಃ18.07.2015 ರಂದು ತನಿಖೆ ಮುಂದುವರಿಸಿ ಸಾಕ್ಷಿದಾರರಾದ ಚಾಸಾ-8 ರಿಂದ 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ11.11.2015 ರಂದು ಚಾಸಾ-15 ರವರಿಂದ ನಿಪಿ-4 ರಂತೆ ಜಾತಿ ವರದಿಯನ್ನು ಸ್ವೀಕರಿಸಿರುತ್ತೇನೆ. ದಿಃ28.11.2015 ರಂದು ಸಂಪಂಗಿರಾಮನಗರದ ಖಾತೆ ನಂಬರ್ 29/38 ರ ದಾಖಲಾತಿಗಳನ್ನು ಉಪನೊಂದಾಣಾಧಿಕಾರಿ, ಬನ್ನೇರುಘಟ್ಟ ಇವರಿಂದ ಸ್ವೀಕರಿಸಿರುತ್ತೇನೆ. ಎರಡು ಇಸಿಗಳನ್ನು ನೋಡಿ ಗುರುತಿಸಿದ್ದು ಕ್ರಮವಾಗಿ ನಿಪಿ-5 ಮತ್ತು 6 ಎಂದು ಸಾಕ್ಷಿ ಸಹಿಯನ್ನು ನಿಪಿ-5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು. ದಿಃ06.02.2013 ರ ನೊಂದಾಯಿತ ಕ್ರಯದ ಕರಾರು ಪತ್ರದ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ನಿಪಿ-7 ಎಂದು ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ದಿಃ19.11.2015 ರಂದು 1 ನೇ ಆರೋಪಿ ಮತ್ತು ಇತರೆ ಕೈಬಿಟ್ಟ ಆರೋಪಿತರು ಮಾನ್ಯ ಉಚ್ಚ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದು ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

4. ದಿಃ28.11.2025 ರಂದು ತನಿಖೆ ಪೂರ್ಣಗೊಳಿಸಿ ಆರೋಪಿತರಾದ ಕವಿತಾ ಮತ್ತು ವೆಂಕಟೇಶ್ ಇವರ ವಿರುದ್ಧ ಆರೋಪ ಸಾಬೀತಾಗದ ಕಾರಣ ಹಾಗೂ 1 ನೇ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ 1 ನೇ ಆರೋಪಿಯ ವಿರುದ್ಧ ದೋಷರೋಪಣೆ ಸಲ್ಲಿಸಿರುತ್ತೇನೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದಲ್ಲಿ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿಪಿ ವಕೀಲರಿಂದಃ**

5. ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದ ನಿವಾಸಿಗಳನ್ನು ನಾನು ಪಂಚಸಾಕ್ಷಿದಾರರಾಗಿ ಮಾಡಿರುವುದಿಲ್ಲ. ಸ್ಥಳದಲ್ಲಿ ಲಭ್ಯವಿದ್ದವರನ್ನು ನಾನು ಸಾಕ್ಷಿದಾರರನ್ನಾಗಿ ಮಾಡಿರುತ್ತೇನೆ. ಚಾಸಾ-13 ಇವರು ಸಮಾಜ ಸೇವಕರಾಗಿದ್ದು ಚಾಸಾ14 ಇವರು ಭೀಮಾ ಕನ್ನಡ ಪತ್ರಿಕೆಯ ಸಂಪಾದರು ಎಂದರೆ ಸರಿ. ಚಾಸಾ-14 ಇವರು ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದವರು ಎಂದರೆ ಸರಿ. ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡದೇ ಹಾಗೂ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡಿರದ ಕಾರಣ ಸ್ಥಳೀಯ ಪಂಚಸಾಕ್ಷಿದಾರರನ್ನು ಪಂಚರಾಗಿ ಮಾಡಿಕೊಂಡಿರದೇ ಬಸವನಗುಡಿ ಹಾಗೂ ನಾಯಂಡಹಳ್ಳಿಯವರನ್ನು ಪಂಚಸಾಕ್ಷಿದಾರರಾಗಿ ಸಹಿಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-13 ಮತ್ತು 14 ಪೋಲಿಸ್ ಠಾಣೆಯ ಖಾಯಂ ಪಂಚಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಾನು ಠಾಣೆಯಲ್ಲಿ ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

6. ಫ್ರಾಸಾ-1 ಇವರು ನನ್ನ ಮುಂದೆ, "ನಮ್ಮ ಮನೆಯನ್ನು ನಾರಾಯಣಸ್ವಾಮಿ ಮತ್ತು ವೆಂಕಟೇಶಪ್ಪ ಇವರಿಗೆ ಸಾಲವನ್ನು ತೀರಿಸುವ ಸಲುವಾಗಿ 28 ಲಕ್ಷ ರೂಪಾಯಿಗಳಿಗೆ ವ್ಯಾಪಾರ ಮಾಡಿ ಬನ್ನೇರುಘಟ್ಟ ಸಬ್ ರಿಜಿಸ್ಟರ್ ಕಛೇರಿಯಲ್ಲಿ ದಿಃ06.02.2013 ರಂದು ನಾರಾಯಣಸ್ವಾಮಿರವರ ಹೆಂಡತಿ ಕವಿತಾ ಮತ್ತು ವೆಂಕಟೇಶ್ ಇವರ ಹೆಸರಿಗೆ ನಮ್ಮ ಮನೆಯ ಕ್ರಯ ಮಾಡಿಕೊಟ್ಟಿರುತ್ತೇವೆ ಮತ್ತು ನಾನು ಮತ್ತು ನನ್ನ ಕುಟುಂಬದವರು ಸಹಿ ಮಾಡಿ ರಿಜಿಸ್ಟರ್ ಮಾಡಿಕೊಟ್ಟಿರುತ್ತೇವೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ರಿಜಿಸ್ಟರ್ ಆದ ನಂತರ ನಾವು ಇದ್ದ ಮನೆಯನ್ನು ಖಾಲಿ ಮಾಡಲು ಆರು ತಿಂಗಳು ಕಾಲಾವಕಾಶ ತೆಗೆದುಕೊಂಡಿದ್ದೆವು" ಎಂದು ನಿಡಿ-2 ರಂತೆ ಹೇಳಿಕೆ ನೀಡಿದ್ದಾರೆ ಎಂದರೆ ಸರಿ.

7. ಫ್ರಾಸಾ-1 ಇವರು ನನ್ನ ಮುಂದೆ, "ನಮ್ಮ ಮನೆಯ ಬಳಿ ನಾರಾಯಣಸ್ವಾಮಿರವರ

ಹೆಂಡತಿ ಕವಿತಾ ಮತ್ತು ವೆಂಕಟೇಶ್‌ರವರುಗಳು ಬಂದು ಗಲಾಟೆ ಮಾಡಿರುವುದಿಲ್ಲ" ಎಂದು ನಿಡಿ-4 ರಂತೆ ಹೇಳಿಕೆ ನೀಡಿದ್ದಾರೆ ಎಂದರೆ ಸರಿ.

8. ಫ್ರಾಸಾ-1 ಇವರು ನನ್ನ ಮುಂದೆ, "ನನ್ನ ಮಗನಿಗೆ ಅಪಘಾತವಾಗಿದ್ದಾಗ ಆರೋಪಿ ನನ್ನ ಗಂಡನ ಬಳಿ ಹಣ ಕೇಳಿದ್ದನು ಮತ್ತು ಹಣ ನೀಡದೇ ಇದ್ದರೆ ಮನೆ ತನ್ನದಾಗುತ್ತದೆ ಎಂದು ಹೇಳಿದ್ದ ಮತ್ತು ರೌಡಿಗಳನ್ನು ಕರೆದುಕೊಂಡು ಬಂದು ಗಲಾಟೆ ಮಾಡಿಸಿದ್ದ ಎಂಬ ಘಟನೆಯು 11 ನೇ ತಾರೀಖು, 6 ನೇ ತಿಂಗಳು ಸಂಜೆ 4 ಘಂಟೆ ಸಮಯದಲ್ಲಿ ಆಗಿದೆ" ಎಂದು ಮುಂದುವರಿದ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಫ್ರಾಸಾ-1 ಇವರು ನನ್ನ ಮುಂದೆ, "ಗಲಾಟೆಯಲ್ಲಿ ಆರೋಪಿ ಹಾಗೂ ಇತರರು ನಮ್ಮನ್ನು ಮನೆಯಿಂದ ಹೊರಗೆ ಹಾಕಿ ಮನೆಯಲ್ಲಿರುವ ಸಾಮಾನುಗಳನ್ನು ಮನೆಯ ಹೊರಗೆ ಹಾಕಿದ್ದನು ಮತ್ತು ನಾವು ದೇವಸ್ಥಾನದಲ್ಲಿ ರಾತ್ರಿ ಕಳೆದಿದ್ದೆವು" ಎಂದು ಮುಂದುವರಿದ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಫ್ರಾಸಾ-1 ಇವರು ನನ್ನ ಮುಂದೆ, "ಆರೋಪಿ ನನ್ನ ಸೀರೆ ಹಿಡಿದು ಎಳೆದಾಡಿದ್ದನು ಮತ್ತು ಘಟನೆ ಸಮಯದಲ್ಲಿ ಊರಿನ ಸಾಕಷ್ಟು ಜನ ಸೇರಿದ್ದರು ಮತ್ತು ಆರೋಪಿತರು ಹೆದರಿಸಿದ್ದರಿಂದ ಯಾರೂ ನಮ್ಮ ಸಹಾಯಕ್ಕೆ ಬಂದಿರಲಿಲ್ಲ" ಎಂದು ಮುಂದುವರಿದ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

9. ಫ್ರಾಸಾ-2 ಇವರು ನನ್ನ ಮುಂದೆ, "2013 ನೇ ಸಾಲಿನಲ್ಲಿ ವೆಂಕಟೇಶಪ್ಪ ಮತ್ತು ನಾರಾಯಣಸ್ವಾಮಿ ಇಬ್ಬರು ನಮಗೆ ನಮ್ಮ ಹಣ ವಾಪಸ್ ಕೊಡಿ ಎಂತ ಹೇಳುತ್ತಿದ್ದರು, ಆಗ ನಮ್ಮ ಬಳಿ ಹಣ ಇಲ್ಲದ ಕಾರಣ ನಮ್ಮ ಮನೆಯನ್ನು 28 ಲಕ್ಷ ರೂಗಳಿಗೆ ವ್ಯಾಪಾರ ಮಾಡಿ ದಿ.6-02-2013 ನೇ ಸಾಲಿನಲ್ಲಿ ನಾರಾಯಣಸ್ವಾಮಿರವರ ಹೆಂಡತಿ ಕವಿತಾ ಮತ್ತು ವೆಂಕಟೇಶ್ ರವರ ಹೆಸರಿಗೆ ಬನ್ನೇರುಘಟ್ಟ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನಮ್ಮ ಮನೆಯನ್ನು ಕ್ರಯ ಮಾಡಿಸಿಕೊಟ್ಟಿರುತ್ತೇವೆ, ಈ ಕ್ರಯ ಪತ್ರಕ್ಕೆ ನಮ್ಮ ಕುಟುಂಬದವರೆಲ್ಲರೂ ಸಹಿ ಮಾಡಿರುತ್ತೇವೆ, ನಮ್ಮ ಮನೆಯನ್ನು ರಿಜಿಸ್ಟರ್ ಮಾಡಿಕೊಟ್ಟ ನಂತರ ನಾವು ಮನೆ ಖಾಲಿ ಮಾಡಲು 6 ತಿಂಗಳ ಕಾಲಾವಕಾಶ ತೆಗೆದುಕೊಂಡಿದ್ದೆವು" ಎಂದು ನಿಡಿ-5 ರಂತೆ ಹೇಳಿಕೆ ನೀಡಿದ್ದಾರೆ ಎಂದರೆ ಸರಿ.

10. ಫ್ರಾಸಾ-2 ಇವರು ನನ್ನ ಮುಂದೆ, "ಆರೋಪಿ ನನ್ನ ಮಗ ಈಗಾಗಲೇ ಅಪಘಾತದಲ್ಲಿ ಗಾಯಗೊಂಡಿದ್ದವನ ಕಾಲನ್ನು ತಿರುವಿದನು ಹಾಗೂ ಆರೋಪಿ ನನ್ನ ತಲೆಗೆ ಹೊಡೆಯಲು ಬಂದಿದ್ದನು" ಎಂದು ನನ್ನ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ಫ್ರಾಸಾ-2 ಇವರು ನನ್ನ ಮುಂದೆ, "ನಾನು ಕುಳಿತುಕೊಂಡಿದ್ದೆನು ಆರೋಪಿ ನನಗೆ ಕೋಲಿನಿಂದ ಹೊಡೆದಿದ್ದನು ಹಾಗೂ ನಾನು ಸ್ಟೇಷನ್ ಗೆ ಫೋನ್ ಮಾಡಿದ್ದೆನು" ಎಂದು ನನ್ನ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ಫ್ರಾಸಾ-2 ಇವರು ನನ್ನ ಮುಂದೆ, "ನನ್ನನ್ನು ಮನೆಯಿಂದ ಹೊರಗೆ ಹಾಕಿ ಬೀಗ ಹಾಕಿದ್ದರಿಂದ ನಾವು ಮೂರು ದಿನ ದೇವಸ್ಥಾನದಲ್ಲಿ ಕುಳಿತುಕೊಂಡಿದ್ದೆವು" ಎಂದು ನನ್ನ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ.

11. ಫ್ರಾಸಾ-3 ಇವರು ನನ್ನ ಮುಂದೆ, "ಆರೋಪಿ ನಮ್ಮ ಮನೆಯ ಬೀಗವನ್ನು ಸಹ ಹಾಕಿದ ಹಾಗೂ ಕುಡಿಯುವ ನೀರು ಬರಬಾರದೆಂದು ತೊಟ್ಟಿಗೂ ಸಹ ಆತ ಬೀಗ ಹಾಕಿದ್ದ ಹಾಗೂ ನಾನು ಸಹಾಯವಾಣಿ ಸಂಖ್ಯೆ 100 ಇದಕ್ಕೆ ಕರೆ ಮಾಡಿದೆ ಹಾಗೂ ಆಗ ಪೊಲೀಸರು ಬಂದರು ಹಾಗೂ ನನ್ನ ಹೆಂಡತಿ ಅತ್ತು ಕೇಳಿಕೊಂಡರೂ ಸಹ ಆರೋಪಿತರು ತೊಂದರೆ ಮಾಡಿದರು ಹಾಗೂ ಚಾಸಾ.5 ಮತ್ತು 6 ಇವರು ಸಹ ಗಲಾಟೆ ಮಾಡಬೇಡಿ ಎಂದು ಆರೋಪಿಗೆ ವಿನಂತಿಸಿದರು ಹಾಗೂ ನನ್ನ ಹೆಂಡತಿಗೆ ನೀನು ನಿನ್ನ ಮಗನನ್ನು ಕರೆದುಕೊಂಡು ಊರಿಗೆ ಹೋಗು ಈ ನನ್ ಮಕ್ಕಳನ್ನು ಒದ್ದು ಪೊಲೀಸ್ ಠಾಣೆಗೆ ಹಾಕುತ್ತೇನೆ ಎಂದು ಆರೋಪಿ ಹೇಳಿದ" ಎಂದು ನನ್ನ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ.

12. ಫ್ರಾಸಾ-3 ಇವರು ನನ್ನ ಮುಂದೆ, "ಆರೋಪಿ ನಾರಾಯಣಸ್ವಾಮಿ ನಮಗೆ ಒಡ್ಡ, ಮಡ್ಡ, ಕೂಕಾ ಅಂತೆಲ್ಲಾ ಬೈದರು" ಎಂದು ನನ್ನ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ಫ್ರಾಸಾ-3 ಇವರು ನನ್ನ ಮುಂದೆ, "ನಮ್ಮನ್ನೆಲ್ಲಾ ಹೊಡೆದು ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿದರು" ಎಂದು ನನ್ನ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಹೊಡೆದು ಸಾಯಿಸುವುದಾಗಿ ಹೇಳಿಕೆ ನೀಡಿಲ್ಲ ಆದರೆ

ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿದರು ಎಂದು ಹೇಳಿಕೆ ನೀಡಿರುತ್ತಾರೆ.

13. 1 ನೇ ಆರೋಪಿಯ ಅಥವಾ ಫ್ರಾಸಾ-1 ಮತ್ತು ಅವರ ಕುಟುಂಬದ ಸದಸ್ಯರ ಫೋನ್ ಗಳನ್ನು ಜಪ್ತಿ ಮಾಡಿಲ್ಲ. ನಿಪಿ-7 ಕ್ರಯದ ಕರಾರು ಪತ್ರದಲ್ಲಿರುವ ಕವಿತಾ ಹಾಗೂ ವೆಂಕಟೇಶ್ ಎಂದರೆ 2 ನೇ ಮತ್ತು 3 ನೇ ಆರೋಪಿತರು ಎಂದರೆ ಸರಿ.

14. ನಿಪಿ-7 ರಂತೆ ಕ್ರಯದ ಕರಾರು ಪತ್ರವನ್ನು ಫ್ರಾಸಾ-1 ಹಾಗೂ ಅವರ ಕುಟುಂಬದವರು 2 ಮತ್ತು 3 ನೇ ಆರೋಪಿತರಿಗೆ ಬರೆದುಕೊಟ್ಟರೂ ಸಹ ಆಸ್ತಿಯ ಸ್ವಾಧೀನ ಕೊಡದೇ ಇದ್ದುದ್ದರಿಂದ ಆರೋಪಿತರು ಸ್ವಾಧೀನ ಕೇಳಿದ್ದಕ್ಕೆ ಪ್ರತೀಕಾರವಾಗಿ ಹಾಗೂ 1 ನೇ ಆರೋಪಿ ಚೆಕ್ ಬೌನ್ಸ್ ಪ್ರಕರಣದಲ್ಲಿ ಫ್ರಾಸಾ-3 ಪ್ರಕಾಶ್ ಇವರಿಗೆ ನೋಟೀಸ್ ಕಳುಹಿಸಿದ್ದ ಕಾರಣ ಈ ಸುಳ್ಳು ದೂರನ್ನು ಫ್ರಾಸಾ-1 ಇವರು ಆರೋಪಿತರ ವಿರುದ್ಧ ನೀಡಿದ್ದು ನಾನು ಸರಿಯಾಗಿ ತನಿಖೆ ಮಾಡದೇ 1 ನೇ ಆರೋಪಿಯ ವಿರುದ್ಧ ಸುಳ್ಳು ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದೋಷರೋಪಣೆ ಪಟ್ಟಿಯಲ್ಲಿ ತೋರಿಸಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದವರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿದಾರರು ಬೇರೆ ಯಾರು ಅಲ್ಲಿ ಸಿಗದ ಕಾರಣ ಅಲ್ಲಿದ್ದವರನ್ನು ಸಾಕ್ಷಿದಾರರನ್ನಾಗಿ ಮಾಡಿರುತ್ತೇನೆ ಎಂದು ಹೇಳುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು